ದಿನಾಂಕ 16-09-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಕೆ.ಪಿ.ಎಸ್., ವಕೀಲರಿಂದಃ

ನಾನು ಮೀನುಗಾರಿಕೆ ನಡೆಸುತ್ತೇನೆ. ನನ್ನ ಬಳಿ ಯಾವುದೇ ಬೋಟ್ ಇರುವುದಿಲ್ಲ. ನಾನು ಮೀನುಗಾರಿಕೆ ಉದ್ಯೋಗ ಎಂದರೆ ಲೆಕ್ಕ ಪತ್ರ ಬರೆಯುವ ಸಹಾಯಕನಾಗಿ ಕೆಲಸ ಮಾಡುತ್ತೇನೆ. ನಾನು 3-4 ಬೋಟುಗಳ ಲೆಕ್ಕಾಚಾರವನ್ನು ನೋಡಿಕೊಳ್ಳುತ್ತೇನೆ. ಸದರಿ ಬೋಟುಗಳ ಹೆಸರು ಸಾಯಿ ದರ್ಶನ್, ಸಾಯಿ ಚರಣ್, ಸಾಯಿ ಸಾಗರ್ ಹಾಗೂ ಸಾಯಿ ಪ್ರಿಯ. ಸದರಿ ಎಲ್ಲಾ ಬೋಟುಗಳಿಗೆ ಆರ್.ಸಿ ಬುಕ್ ಇರುತ್ತದೆ. ಸದರಿ ಮಾಲಿಕರ ಹೆಸರು ನನಗೆ ಗೊತ್ತು. ಸಾಯಿ ದರ್ಶನ್ ನ ಮಾಲೀಕರ ಹೆಸರು ಸುರೇಶ್, ಸಾಯಿ ಚರಣ್ ನ ಮಾಲೀಕರ ಹೆಸರು ನನ್ನ ಹೆಂಡತಿ ಸಾವಿತ್ರಿ ಅನಿಲ್. ಸಾಯಿ ಸಾಗರ್‌ನ ಮಾಲೀಕರ ಹೆಸರು ಅನಿತಾ ಸುಂದರ್, ಸಾಯಿ ಪ್ರಿಯ ಇದರ ಮಾಲೀಕರ ಹೆಸರು ಮಾಧವ ಕರ್ಕೇರ ಇರುತ್ತದೆ. ಸದರಿ ಎಲ್ಲಾ ಬೋಟಿನ ಮಾಲೀಕರು ನನ್ನ ಜಾತಿಯವರು, ಆದರೆ ಸಂಬಂಧಿಕರು ಎಂದರೆ ಸರಿಯಲ್ಲ. ಸದರಿ ಎಲ್ಲಾ ಬೋಟುಗಳ ಆರ್.ಸಿ., ಬುಕ್ಕನ್ನು ನ್ಯಾಯಾಲಯಕ್ಕೆ ಹಾಜರು ಮಾಡುತ್ತೀರಾ ಎಂದರೆ ಸಾಕ್ಷಿ, ಸದರಿ ಮಾಲೀಕರು ಕೊಡುವುದಿಲ್ಲ ಎನ್ನುತ್ತಾರೆ. ಅವರ ಬಳಿ ಕೇಳಿ ಹಾಜರುಪಡಿಸುತ್ತೀರಾ ಎಂದರೆ ನಾನು ಜವಾಬ್ದಾರನಲ್ಲ.

2. ಸಾಯಿ ಚರಣ್ ಬೊಟನ್ನು ನಾನೇ ನನ್ನ ಹೆಂಡತಿ ಹೆಸರಿನಲ್ಲಿ ಕ್ರಯ ಮಾಡಿ ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ. ಎಲ್ಲಾ ಬೋಟುಗಳು ಮೀನುಗಾರಿಕಾ ಇಲಾಖೆಯಲ್ಲಿ ನೋಂದಾವಣಿ ಆಗುತ್ತದೆ ಎಂದರೆ ಸರಿ. ಸದರಿ ಇಲಾಖೆಗೆ ಅರ್ಜಿ ಸಲ್ಲಿಸಿ ಮಾಲೀಕತ್ವದ ದಾಖಲಾತಿಯನ್ನು ಹಾಜರುಪಡಿಸಬಹುದಾ ಎಂದರೆ ನಾನು ಜವಾಬ್ದಾರನಲ್ಲ.

3. ನಾನು ಒಂಬತ್ತನೇ ತರಗತಿ ತನಕ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು 2012 ರಿಂದ 2015 ರ ತನಕ ಸಂಜನಾ ಫಿಶಿಂಗ್ ಬೋಟಿನ ರೈಟರ್ ಆಗಿ ಕೆಲಸ ಮಾಡುತ್ತಿದ್ದೆ. ಸದರಿ ಬೋಟಿನ ಮಾಲೀಕರ ಹೆಸರು ಸುನಿಲ್ ಆಗಿರುತ್ತದೆ. ಸದರಿ ದಾಖಲೆಯನ್ನು ನಾನು ನೋಡಿರುತ್ತೇನೆ. ಸದರಿ ಬೋಟಿನ ಆರ್.ಸಿ ದಾಖಲೆಯನ್ನು ಮಾಲೀಕರನ್ನು ಕೇಳಿಕೊಂಡು ಹಾಜರುಪಡಿಸಬಹುದು.

4. ಸದರಿ ಸಂಜನಾ ಬೋಟಿನಲ್ಲಿ ಮೀನುಗಾರಿಕೆಗೆ ಹೋದಾಗ ದಿನಾಂಕ 13-12-2014 ರಂದು ಗಣೇಶ್ ಎಂ. ನಾಯ್ಕ್ ಬಿದ್ದು ಮೃತಪಟ್ಟಿರುತ್ತಾರೆ ಎಂದರೆ ಸರಿಯಲ. ಸಾಕ್ಷಿ ಮುಂದುವರಿದು ಆತ ಮಲ್ಪೆಯ ಬಾಪುತೋಟದಲ್ಲಿ ಬೋಟನ್ನು ಮೇಲೆ ಎಳೆದುಕೊಳ್ಳುವ ಸ್ಥಳದಲ್ಲಿ ನೆಲದಲ್ಲಿ ಬಿದ್ದು ಗಾಯಗೊಂಡಿದ್ದನು ಎನ್ನುತ್ತಾರೆ. ಆತನಿಗೆ ಆದರ್ಶ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು ಎಂದರೆ ಸರಿ. ನಂತರ ಮಣಿಪಾಲದ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾನೆ. ಈ ಬಗ್ಗೆ ಮಲ್ಪೆ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಾಗಿದೆ ಎಂದರೆ ಸರಿ. ಸದರಿ ದಾಖಲೆಯ ಬಗ್ಗೆ ನನಗೆ ಮಾಹಿತಿ ಇದೆ. ಸಾಕ್ಷಿ ಮುಂದುವರಿದು, ನಾನು ಸದರಿ ದಾಖಲೆಗಳನ್ನು ನೋಡಿಲ್ಲ ಎನ್ನುತ್ತಾರೆ. ಅರ್ಜಿದಾರರು ಸಲ್ಲಿಸಿರುವ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಸಾಕ್ಷಿ ಮುಂದುವರಿದು, ಮೃತ ಕುಟುಂಬದವರಿಗೆ ವಿಮಾ ಪರಿಹಾರ ಈಗಾಗಲೇ ಸಿಕ್ಕಿದೆ ಎನ್ನುತ್ತಾರೆ. ಮೃತಪಟ್ಟ ಸಮಯವೇ ನ್ಯೂ ಇಂಡಿಯಾ ಇನ್ಸೂರೆನ್ಸ್ ಕಂಪನಿಯವರು ಪರಿಹಾರ ನೀಡಿದ್ದು, ಈ ಬಗ್ಗೆ ದಾಖಲೆಯನ್ನು ಹಾಜರುಪಡಿಸಬಹುದು. ಸದರಿ ಸಂಜನಾ ಬೋಟಿಗೆ ವಿಮೆ ಚಾಲ್ತಿಯಲ್ಲಿ ಇತ್ತು. ಸದರಿ ವಿಮೆ ಬೋಟಿನ ಮಾಲೀಕರಾದ ಸುನಿಲ್ ಕುಮಾರ್ ರವರ ಹೆಸರಿನಲ್ಲಿ ಇತ್ತು. ಸದರಿ ಸುನಿಲ್ ಕುಮಾರ್ ನನ್ನು ಸಾಕ್ಷಿದಾರರಾಗಿ ಕರೆಯಿಸಬಹುದು.

5. ನಾನು ಇಲ್ಲಿಯ ತನಕ ಅರ್ಜಿದಾರರಿಗೆ ಪರಿಹಾರ ನೀಡಿಲ್ಲ. ಸಾಕ್ಷಿ, ನಾನು ಬರೇ ಬೋಟಿನ ರೈಟರ್ ಎನ್ನುತ್ತಾರೆ. ನಾನು ಸಂಜನಾ ಬೊಟೀನ ಮಾಲೀಕನಾಗಿರುತ್ತೇನೆ ಹಾಗೂ ಮೃತ ನನ್ನ ಕೈಕೆಳಗೆ ನೌಕರನಾಗಿದ್ದನು ಎಂದರೆ ಸರಿಯಲ್ಲ. ಹಾಗಾಗಿ ನಾನು ಅರ್ಜಿದಾರರಿಗೆ ಪರಿಹಾರ ನೀಡಲು ಬಾಧ್ಯಸ್ಥನಿರುತ್ತೇನೆ ಎಂದರೆ ಸರಿಯಲ್ಲ. ಮಲ್ಪೆ ಠಾಣೆಯಲ್ಲಿ ನನ್ನ ವಿರುದ್ಧ ನಿಪಿ.1 ರಂತೆ ಪ್ರಕರಣ ದಾಖಲಾಗಿತ್ತು ಎಂದರೆ ಸರಿಯಲ್ಲ. ನನ್ನ ಬಾಧ್ಯಸ್ಥಿಕೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಂಜನಾ ಬೋಟಿಗೆ ಯಾವುದೇ ವಿಮೆ ಇರಲಿಲ್ಲ ಹಾಗೂ ಅದೇ ಕಾರಣಕ್ಕೆ ನಾನು ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ ಉಡುಪಿ.